# ಪರೀಕ್ಷೆಯನ್ನು ಎದುರಿಸುವುದು ಹೇಗೆ?

## ಓದಿನ ಮರ್ಮ

ಪರೀಕ್ಷೆಯ ಸಮಯವೆಂದರೆ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಬಿಸಿಯ ಸಮಯ. ಒಂದು ಬೇಸಿಗೆಯ ಬಿಸಿಯಾದರೆ, ಇನ್ನೊಂದು ಅದರ ತೀಕ್ಷ್ಣತೆಯನ್ನು ಹೆಚ್ಚಿಸುವ ಆತಂಕದ ಬಿಸಿ.

ವಿದ್ಯಾರ್ಥಿಯೊಬ್ಬ ಕಡಮೆ ಅಂಕಗಳನ್ನು ಗಳಿಸಲು ಕಾರಣವೇನೆಂಬ ಪ್ರಶ್ನೆಯನ್ನು ನಮ್ಮಷ್ಟಕ್ಕೆ ಹಾಕಿಕೊಂಡಾಗ ನಾವು ಹಲವಾರು ಸಂಗತಿಗಳನ್ನು ಪರಿಶೀಲಿಸಬೇಕಾಗುತ್ತದೆ. ಅಧ್ಯಯನದಲ್ಲಿ ಆಸಕ್ತಿಯೇ ಇಲ್ಲದೆ, ಪರೀಕ್ಷೆಗಾಗಿ ಶ್ರಮವನ್ನೇ ವಹಿಸದೆ, ಹೆಸರಿಗೆ ಮಾತ್ರ ವಿದ್ಯಾರ್ಥಿಗಳೆನ್ನಿಸಿಕೊಳ್ಳುವವರ ದೊಡ್ಡ ಸಮುದಾಯವನ್ನು ನಾವು ಹೊರತುಪಡಿಸಿದರೂ, ವರ್ಷವೆಲ್ಲ ಓದಿಯೂ ಸಫಲತೆಯನ್ನು ಪಡೆಯದ ವಿದ್ಯಾರ್ಥಿಗಳ ಇನ್ನೊಂದು ದೊಡ್ಡ ಗುಂಪನ್ನು ನಾವು ಪರಿಗಣಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ರಮ ಹಾಗೂ ಪರೀಕ್ಷೆಯ ಸಫಲತೆಗಳ ಅರ್ಥಪೂರ್ಣ ಸಂಬಂಧದ ಬಗ್ಗೆ ವಿವೇಚಿಸುವುದು ಅತ್ಯಂತ ಅವಶ್ಯವಾಗುತ್ತದೆ.

ಈಗ ನಮ್ಮ ಓದುವ ವಿದ್ಯಾರ್ಥಿಗಳನ್ನು ಒಂದಿಷ್ಟು ಗಮನಕ್ಕೆ ತಂದುಕೊಳ್ಳೋಣ. ಅವರು ಓದುತ್ತಾರೆ– ವರ್ಷದುದ್ದಕ್ಕೂ ಓದುತ್ತಾರೆ; ಆ ಮೂಲಕವೇ ಪರೀಕ್ಷೆಗೆ ಸಿದ್ಧರಾಗುತ್ತಾರೆ. ಆದರೆ ಬಹಳಷ್ಟು ಸಂಖ್ಯೆಯ ವಿದ್ಯಾರ್ಥಿಗಳಲ್ಲಿ ಈ ಓದು ಗುಣಾತ್ಮಕವಾಗಿ ಯಾವ ಬದಲಾವಣೆಯನ್ನೂ ಪಡೆಯುತ್ತ ಹೋಗುವುದಿಲ್ಲ. ಎಂದರೆ ಇಲ್ಲಿ, ಮೊದಲನೆಯದಾಗಿ, **ಅರ್ಥ ಮಾಡಿಕೊಳ್ಳುವುದಕ್ಕಾಗಿ ಓದುವುದಕ್ಕೂ, ಅರ್ಥಮಾಡಿಕೊಂಡಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಲು ಓದುವುದಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ**. ಎರಡನೆಯದಾಗಿ, ಪರೀಕ್ಷೆ ಆರು ತಿಂಗಳಿರುವಾಗ ಓದುವುದಕ್ಕೂ, ಎರಡು ತಿಂಗಳಿರುವಾಗ ಓದುವುದಕ್ಕೂ, ಪರೀಕ್ಷೆಯ ಹಿಂದಿನ ದಿನ ಓದುವುದಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಓದು ಹಾಗೂ ಪರೀಕ್ಷೆಗಳು ಸ್ವರೂಪದ ದೃಷ್ಟಿಯಿಂದ ಪಡೆದುಕೊಳ್ಳುವ ಸಂಬಂಧದ ಕಡೆಗೆ ಗಮನವನ್ನು ಕೊಡದಿರುವುದೇ ಇಂತಹ ಪದ್ಧತಿಗೆ ಕಾರಣವಾಗುತ್ತದೆ.

ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸುವುದಕ್ಕೆ ವಿಷಯದ ತಿಳಿವಳಿಕೆ ಎಷ್ಟು ಅಗತ್ಯವೋ ಬರವಣಿಗೆಯ ಕೌಶಲವೂ ಅಷ್ಟೇ ಅಗತ್ಯವೆಂಬುದರ ಕಡೆಗೆ ನಮ್ಮ ಹೆಚ್ಚಿನ ವಿದ್ಯಾರ್ಥಿಗಳು ಗಮನಹರಿಸುವುದಿಲ್ಲ. ಇವುಗಳಲ್ಲಿ ಒಂದು, ಪರೀಕ್ಷೆಯಲ್ಲಿ **ಏನು** ಬರೆಯಬೇಕೆಂಬುದು, ಇನ್ನೊಂದು ಪರೀಕ್ಷೆಯಲ್ಲಿ **ಹೇಗೆ** ಬರೆಯಬೇಕೆಂಬುದು. ಮೊದಲನೆಯದರ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ಎರಡನೆಯದರಲ್ಲಿ ಪ್ರಶ್ನೆಪತ್ರಿಕೆಯ ಸ್ವರೂಪ, ಪ್ರಶ್ನೆಗಳ ಸ್ವರೂಪ, ಕೊಟ್ಟಿರುವ ಕಾಲಮಿತಿಯೊಳಗೆ ಉತ್ತರಿಸಬೇಕಾದರೆ ಅನುಸರಿಸಬೇಕಾದ ವಿಧಾನ ಇತ್ಯಾದಿ ಅಂಶಗಳೆಲ್ಲವೂ ಸೇರಿಕೊಳ್ಳುತ್ತವೆ. **ಪರೀಕ್ಷೆಯಲ್ಲಿ ಏನು ಬರೆಯಬೇಕೆಂಬುದನ್ನು ತಿಳಿಯುವುದೆಂದರೆ ವಿಷಯವನ್ನು ಸರಿಯಾಗಿ ಗ್ರಹಿಸುವುದು;** ಅಂದರೆ ಅದಕ್ಕಾಗಿ ಓದುವುದು. **ಪರೀಕ್ಷೆಯನ್ನು ಹೇಗೆ ಬರೆಯುವುದು ಎಂದರೆ ಗ್ರಹಿಸಿದ್ದನ್ನು ಅಭಿವ್ಯಕ್ತಿಸುವುದು.** ಈ ಗ್ರಹಿಕೆ–ಅಭಿವ್ಯಕ್ತಿಗಳ ನಡುವಿನ ಅಂತರವನ್ನು ಒಂದಿಷ್ಟು ಮನಗಂಡರೂ ಸಾಕು, ನಮ್ಮ ವಿದ್ಯಾರ್ಥಿಗಳು ಸಾಮಾನ್ಯವಾಗಿ ನಿರ್ಲಕ್ಷಿಸುವ ಸಂಗತಿ ತಟ್ಟನೆ ನಮ್ಮ ಗಮನಕ್ಕೆ ಬರುತ್ತದೆ. ಅದೇ ಗ್ರಹಿಕೆಗಾಗಿ ಪಡೆಯುವ ತರಬೇತಿಯೊಂದೇ ಸಮರ್ಥ ಅಭಿವ್ಯಕ್ತಿಗೂ ನಮ್ಮನ್ನು ಸಜ್ಜುಗೊಳಿಸುವುದಿಲ್ಲ ಎಂಬುದು. ವಿಷಯವನ್ನು ತಿಳಿದಿದ್ದರೂ ಸರಿಯಾಗಿ ಬರೆಯಲು ಸಾಧ್ಯವಾಗಲಿಲ್ಲವೆಂದು, ಸಮಯ ಸಾಕಾಗಲಿಲ್ಲವೆಂದು ವಿದ್ಯಾರ್ಥಿಗಳು ಕಾರಣಗಳನ್ನು ಕೊಡುವುದನ್ನು ಗಮನಿಸಿದಾಗ, **ಗ್ರಹಿಕೆ ಮತ್ತು ಅಭಿವ್ಯಕ್ತಿ – ಇವೆರಡೂ ಪ್ರಕ್ರಿಯೆಯ ದೃಷ್ಟಿಯಿಂದ ಪಡೆದುಕೊಳ್ಳುವ ವ್ಯತ್ಯಾಸ** ನಮ್ಮ ಗಮನಕ್ಕೆ ಬರುತ್ತದೆ. ಇದರಿಂದಾಗಿ ಪರೀಕ್ಷೆಗಾಗಿ ಓದುವುದೆಂದರೆ, ಏನು ಬರೆಯಬೇಕಾಗಿದೆಯೆಂಬುದನ್ನು ಅಭ್ಯಾಸ ಮಾಡುವುದು ಎಂದು ಕೂಡ ಆಗುತ್ತದೆ. ಹೀಗಾಗಿ ಪರೀಕ್ಷೆಯನ್ನು ಸರಿಯಾಗಿ ಎದುರಿಸಲು 'ಚೆನ್ನಾಗಿ ಓದುವುದು' ಮಾತ್ರವೇ ಸಾಕಾಗುವುದಿಲ್ಲ ಎಂಬುದೂ ಮನವರಿಕೆಯಾಗುತ್ತದೆ.

ಇನ್ನು ಓದುಗಳ ನಡುವಣ ವ್ಯತ್ಯಾಸದ ಬಗ್ಗೆ ಒಂದು ಮಾತು. ಮೊದಲ ಹಂತದಲ್ಲಿ ನಾವು ವಿಷಯದ ಗ್ರಹಿಕೆಗಾಗಿ ಓದುತ್ತೇವೆ; ತಿಳಿವಳಿಕೆಯನ್ನು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಎರಡನೆಯ ಹಂತದಲ್ಲಿ ನಾವು ಈಗಾಗಲೇ ಅರಿತುಕೊಂಡಿರುವುದನ್ನು ಮನನ ಮಾಡಿಕೊಳ್ಳಲು ಓದುತ್ತೇವೆ. ಹೀಗಾಗಿ, ಮೊದಲ ಹಂತದ ಓದು ಸೂಕ್ಷ್ಮಸ್ತರದ್ದಾದರೆ, ಎರಡನೆಯ ಹಂತದ ಓದು ಸ್ಥೂಲ ಸ್ತರದ್ದಾಗುತ್ತದೆ. ಎಂದರೆ ಈ ಎರಡೂ ಬಗೆಯ ಓದುಗಳಿಗೆ ಬೇರೆ ಬೇರೆ ಪಠ್ಯಗಳನ್ನು ನಾವು ಸಿದ್ಧಪಡಿಸಬೇಕಾಗುತ್ತದೆ. ಈ ಮೂಲಕ ಸಮಯದ ಉಳಿತಾಯವೂ ಆಗಿ, ಪರೀಕ್ಷೆ ಬಂದಂತೆಲ್ಲ ಕಡಮೆ ಅವಧಿಯಲ್ಲಿ ಹೆಚ್ಚಿನ ವಿಷಯಗಳನ್ನು ಮನನ ಮಾಡಲೂ ಸಾಧ್ಯವಾಗುತ್ತದೆ. ಹೀಗಲ್ಲದೆ ವರ್ಷದುದ್ದಕ್ಕೂ ಅದದೇ ಮುದ್ರಿತ ಪಠ್ಯವನ್ನೋ ಅಥವಾ 'ನೋಟ್ಸ್'ಗಳನ್ನೋ ಓದುತ್ತ ಶ್ರಮಿಸುತ್ತಿದ್ದರೆ, ಶ್ರಮಿಸಿದೆವೆಂಬ ಕೃತಕೃತ್ಯತೆ ಮಾತ್ರ ಬರಬಹುದೇ ಹೊರತು, ಶ್ರಮದ ಫಲ ಬರಲಾರದು. ಸನ್ನೆಗಳ ಉಪಯೋಗದಿಂದ ಕಡಮೆ ಶಕ್ತಿಯನ್ನು ಬಳಸಿಯೂ ಹೆಚ್ಚು ಭಾರವನ್ನೆತ್ತಲು ಸಾಧ್ಯವೆಂಬುದನ್ನು ಮನುಷ್ಯ ಕಂಡುಕೊಂಡ. ಹಾಗೆಯೇ ನಮ್ಮ ಸಿದ್ಧತೆ ಒಂದಿಷ್ಟು ವ್ಯವಸ್ಥಿತ ರೂಪವನ್ನು ಪಡೆದುಕೊಂಡಂತೆಲ್ಲ, ನಮ್ಮ ಶ್ರಮವೂ ಹೆಚ್ಚಿನ ಪ್ರತಿಫಲವನ್ನು ನೀಡದಿರದು.

– ಡಾ. ಹೆಚ್. ಎನ್. ಮುರಳೀಧರ,
ಪ್ರಾಧ್ಯಾಪಕರು, ವಾಸವಿ ಕಾಲೇಜು, ಬೆಂಗಳೂರು